# ಎಂ–ಪಾಸ್‌ಪೋರ್ಟ್ (m-Passport)

## ( Mobile Passport Police App )

************

ಮೊಬೈಲ್ ಪಾಸ್‌ಪೋರ್ಟ್ ಅಪ್ಲಿಕೇಶನ್ (m-Passport Police App) (ಪಾಸ್‌ಪೋರ್ಟ್ ಅರ್ಜಿಗಳ ಪರಿಶೀಲನೆಗೆ ಸಂಬಂಧಿಸಿದ) ಇದು ಅಕ್ಟೋಬರ್–2019 ರಿಂದ ಜಾರಿಗೆ ಬಂದಿರುತ್ತದೆ, ಇದರ ಉದ್ದೇಶವು ಮೊಬೈಲ್ ಅಪ್ಲಿಕೇಶನ್ ಬಳಸಿ ಪಾಸ್‌ಪೋರ್ಟ್ ಪರಿಶೀಲನೆ ತ್ವರಿತವಾಗಿ ಮಾಡಿ ಕಾರ್ಯದ ಒತ್ತಡ ಕಡಿಮೆ ಮಾಡುವ ಮೂಲಕ, ಸಮಯದ ಉಳಿತಾಯ, ಕಾಗದ ರಹಿತ ಮತ್ತು ತ್ವರಿತವಾಗಿ ಸೇವೆಯು ಅರ್ಜಿದಾರರಿಗೆ ಲಭಿಸಲಿ ಹಾಗೂ ಯಾವುದೇ ಕಾರಣಕ್ಕೂ ವಿಳಂಭವಾಗದೇ ಪಾಸ್‌ಪೋರ್ಟ್ ದೊರಯಲಿ ಎಂಬ ಉದ್ದೇಶದಿಂದ ಜಾರಿಗೊಳಿಸಲಾಗಿರುತ್ತದೆ.

- ಈ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯ ಕಾನೂನು ಮತ್ತು ಸುವ್ಯವಸ್ಥೆಯ 20 ಪೊಲೀಸ್ ಠಾಣೆಗಳಿಗೆ ಪಾಸ್‌ಪೋರ್ಟ್ ಪರಿಶೀಲನೆ ಸಂಬಂಧ ಎಸ್.ಸಿ.ಆರ್.ಬಿ ಬೆಂಗಳೂರಿನಿಂದ ಟ್ಯಾಬ್‌ಲೆಟ್‌ಗಳನ್ನು (**Tablet (in the range e.g. iBall 1026-Q18(Wi-Fi+3G+Screen Size=10) with Android OS and 3G Internet Connection for Data.)** ವಿತರಿಸಲಾಗಿರುತ್ತದೆ.

- ಜಿಲ್ಲೆಯ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ಠಾಣೆಗಳಿಗೆ ವಿತರಿಸಲಾಗಿರುವ ಟ್ಯಾಬ್‌ಲೆಟ್‌ಗಳಿಗೆ ಮೊಬೈಲ್ **User ID & Password** ಗಳನ್ನು ಪ್ರತ್ಯೇಕವಾಗಿ ನೀಡಲಾಗಿರುತ್ತದೆ.

- ಇದರ ನಿರ್ವಹಣೆ ಬಗ್ಗೆ ಪ್ರತಿ ಠಾಣೆಯ ಒಬ್ಬ ಸಿಬ್ಬಂದಿಯವರಿಗೆ (ಠಾಣಾ ಬರಹಗಾರರು/ಗಣಕಯಂತ್ರ ನಿರ್ವಾಹಕರು) ತರಬೇತಿಯನ್ನು ನೀಡಲಾಗಿರುತ್ತದೆ.

- ಅರ್ಜಿದಾರರು ತಮ್ಮ ಹತ್ತಿರದ ಪಾಸ್‌ಪೋರ್ಟ್ ಸೇವಾ ಕೇಂದ್ರ **(PSKs)** ಅಥವಾ ಪೋಸ್ಟ್ ಆಫೀಸ್ ಸೇವಾ ಕೇಂದ್ರದಲ್ಲಿ **(POPSKs)** ನೇರವಾಗಿ ಅಥವಾ ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಬಹುದು.

- ಅರ್ಜಿದಾರರು ಅರ್ಜಿ ಸಲ್ಲಿಸದ ನಂತರ ತಮ್ಮ ದಾಖಲಾತಿಗಳ ಪರಿಶೀಲನೆಯಾಗುತ್ತದೆ.

- ಅರ್ಜಿದಾರರಿಗೆ ಪ್ರತಿ ಹಂತದ ಬೆಳವಣಿಗೆಯ ಬಗ್ಗೆ ತಮ್ಮ ಮೊಬೈಲ್‌ಗೆ ಸಂದೇಶ ರವಾನೆಯಾಗುತ್ತದೆ.

- ಪಾಸ್‌ಪೋರ್ಟ್ ಅರ್ಜಿಗಳು ಸಂಬಂಧಪಟ್ಟ ಅಭ್ಯರ್ಥಿಯ ವಿಳಾಸದ ಪೊಲೀಸ್ ಠಾಣೆಗೆ ನೇರವಾಗಿ ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿಯಿಂದ (ಆರ್.ಪಿ.ಓ) ಆನ್‌ಲೈನ್‌ನಲ್ಲಿ ಬರುತ್ತವೆ.

- ಸಂಬಂಧಿಸಿದ ಪೊಲೀಸ್ ಠಾಣೆರವರುಗಳು ತಮಗೆ ಒದಗಿಸಲಾಗಿರುವ **User ID & Password** ನಿಂದ ಠಾಣಾ ಗಣಕಯಂತ್ರದಲ್ಲಿ ಪಾಸ್‌ಪೋರ್ಟ್ ಪರಿಶೀಲನಾ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ನಂತರ ಟ್ಯಾಬ್‌ಲೆಟ್ ನೊಂದಿಗೆ ಅಭ್ಯರ್ಥಿಯ ವಿಳಾಸಕ್ಕೆ ಹೋಗಿ ಪರಿಶೀಲನೆ ಮಾಡಬೇಕಾಗಿರುತ್ತದೆ.

- ಮೊದಲು ಪೊಲೀಸ್ ಠಾಣಾ ಹಂತದಿಂದ ಪರಿಶೀಲನೆ ನಡೆಸಿ ಅಪ್‌ಲೋಡ್ ಮಾಡಿದ ನಂತರ ಜಿಲ್ಲಾ ವಿಶೇಷ ವಿಭಾಗ ಮತ್ತು ಪಾಸ್‌ಪೋರ್ಟ್ ಸೆಲ್, ಜಿಲ್ಲಾ ಪೊಲೀಸ್ ಕಛೇರಿ (**DPHQ**) ನಲ್ಲಿ ಪರಿಶೀಲಿಸಿ ಮಾನ್ಯ ಮೇಲಾಧಿಕಾರಿಗಳ ಆದೇಶದಂತೆ ಅಧಿಕಾರಿಗಳ ಡಿಜಿಟಲ್ ಸಹಿಯೊಂದಿಗೆ ಆರ್‌ಪಿಓ ಗೆ ವಿಲೇವಾರಿ ಮಾಡುವ ಬಗ್ಗೆ ಕ್ರಮ ವಹಿಸಲಾಗುತ್ತಿರುತ್ತದೆ.
- ಅರ್ಜಿದಾರರು ಅರ್ಜಿ ಸಲ್ಲಿಸಿದ ನಂತರದಿಂದ 2 ವಾರಗಳ ಒಳಗಾಗಿ ಎಲ್ಲಾ ಹಂತದ ಪರಿಶೀಲನೆ ನಡೆಸಿ ವಾಪಸ್ ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿಗೆ ರವಾನಿಸಲಾಗುತ್ತದೆ.

- ಅರ್ಜಿದಾರರು ಒದಗಿಸಿರುವ ತಮ್ಮ ಅಂಚೆ ವಿಳಾಸಕ್ಕೆ ನೋಂದಣಿ ಅಂಚೆ ಮೂಲಕ ಪಾಸ್‌ಪೋರ್ಟ್ ವಿತರಣೆಯಾಗುತ್ತದೆ.

ಈ ಮೊದಲು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರದಿಂದ ಪಾಸ್‌ಪೋರ್ಟ್ ಅರ್ಜಿಗಳು ಡೌನ್‌ಲೋಡ್ ಆಗುತ್ತಿದ್ದು, **DPHQ** ನಲ್ಲಿ ಪೊಲೀಸ್ ಐಟಿ ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಿ ಸಂಬಂಧಿಸಿದ ಪೊಲೀಸ್ ಠಾಣೆಗೆ ಕಳುಹಿಸಿಕೊಡಲಾಗುತ್ತಿತ್ತು, ಇದರ ಕಾಲಮಿತಿಯು 21 ದಿನಗಳ ವರೆಗೆ ಕಾಲಾವಕಾಶವಿರುತ್ತಿತ್ತು. ಆದರೆ ಈಗ ಎಂ–ಪಾಸ್‌ಪೋರ್ಟ್ ಜಾರಿಯಾದಾಗಿನಿಂದ ಪಾಸ್‌ಪೋರ್ಟ್ ಪರಿಶೀಲನಾ ಅರ್ಜಿಗಳು ಪಾಸ್‌ಪೋರ್ಟ್ ಕಛೇರಿಯಿಂದ ನೇರವಾಗಿ ಸಂಬಂಧಿಸಿದ ಪೊಲೀಸ್ ಠಾಣೆಗಳಿಗೆ ಅರ್ಜಿಗಳು ನೇರವಾಗಿ ಹೋಗುವುದರಿಂದ ವಿಚಾರಣಾವಧಿ ಅಂದಿನಿಂದಲೇ ಪ್ರಾರಂಭವಾಗುತ್ತದೆ, ಇದು ಕೇವಲ 15 ದಿನಗಳ ಒಳಗಾಗಿ ( **Police Station Verification Process Completed within 14 Days ofter one day DPHQ Verifcation)** ವಿಲೇವಾರಿ ಮಾಡಲಾಗುತ್ತಿರುತ್ತದೆ.